ಈ ಸಂಜೆ

Sunday 28th August 2022, Page No.07

## Graduation Day at R V College of Engineering

# ರಾಷ್ಟ್ರ ನಿರ್ಮಾಣದಲ್ಲಿ ಯುವ ಇಂಜಿನಿಯರ್‌ಗಳ ಪಾತ್ರ ಮಹತ್ವದ್ದು



**ಕೆಂಗೇರಿ, ಆ.28-** ತಾಂತ್ರಿಕ ಯುಗದ ಅವಶ್ಯಕತೆ ಅನುಗುಣ ವಾಗಿ ಇಂಜಿನಿಯರ್‌ಗಳು ಸುಧಾರಿತ ತಾಂತ್ರಿಕ ಕೌಶಲ್ಯದ ಅರಿವಿನೊಂದಿಗೆ ಕಾರ್ಯ ನಿರ್ವಹಿಸುವ ಮೂಲಕ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸಬೇಕೆಂದು ಸಿಎಂಆರ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ. ರಾಮಮೂರ್ತಿ ಹೇಳಿದರು.

ಬೆಂಗಳೂರು-ಮೈಸೂರು ಮುಖ್ಯ ರಸ್ತೆಯ ರಾವಿ ತಾಂತ್ರಿಕ ಮಹಾವಿದ್ಯಾಲಯದ ವತಿಯಿಂದ ಪೂರ್ಣಿಮಾ ಪ್ಯಾಲೇಸ್‌ನಲ್ಲಿ ಆಯೋಜಿಸಿದ್ದ 12ನೇ ಪದವಿ ಪ್ರಧಾನ ಸಮಾರಂಭದಲ್ಲಿ ಪದವೀಧರರಿಗೆ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ಪದವೀಧರರ ಸವಾಲಿನ ವೃತ್ತಿ ಜೀವನದ ಯಶಸ್ಸಿಗೆ ವೃತ್ತಿಪರತೆ, ಆಳವಾದ ಮತ್ತು ಬದ್ಧವಾದ ಮೂಲಭೂತ ಅಂಶಗಳ ಬಗ್ಗೆ ಅಗತ್ಯ ಜ್ಞಾನದ ಅರಿವು ಹೆಚ್ಚಿಸಿ ಕೊಂಡು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲು ಶ್ರಮಿಸಬೇಕೆಂದು ಕರೆ ನೀಡಿದರು.

ಯುವ ಇಂಜಿನಿಯರ್‌ಗಳು ಭಾರತ್ ರತ್ನ ಸರ್ ಎಂ. ವಿಶ್ವೇಶ್ವರಯ್ಯ ನವರ ಸಮರ್ಪಣಾ ಭಾವ, ಸಾಮಾಜಿಕ ಬದ್ಧತೆ ಮತ್ತು ಶಿಸ್ತನ್ನು ರೂಢಿಸಿಕೊಂಡು ಕಾರ್ಯ ಪ್ರವೃತ್ತರಾಗಬೇಕೆಂದು ಸಲಹೆ ನೀಡಿದರು.

ಬೆಂಗಳೂರು ಅಂತಾರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕ ಡಾ. ದೇಬಬ್ರತ ದಾಸ್ ಮಾತನಾಡಿ, ಕೌಶಲ್ಯ ಮತ್ತು ಮೂಲ ಜ್ಞಾನದ ನಡುವಿನ ತಿಳುವಳಿಕೆಯೊಂದಿಗೆ ಕಠಿಣ ಪರಿಶ್ರಮ, ನಿರ್ದಿಷ್ಟ ಗುರಿ, ನಿಖರವಾದ ಮನೋಭಾವ ಮತ್ತು ಸಮಗ್ರತೆಯಿಂದ ಕಾರ್ಯ ಪ್ರವೃತ್ತರಾದಾಗ ಪದವೀಧರರು ವೃತ್ತಿ ಜೀವನದಲ್ಲಿ ಸಾಧನೆಯ ಉತ್ತುಂಗಕ್ಕೇರಿ ನೂತನ ಮೈಲಿಗಲ್ಲು ಸ್ಥಾಪಿಸಬಹುದಾಗಿದೆ ಎಂದರು.

ಹೊಸ ಆಲೋಚನೆಗಳು ಮತ್ತು ಅವಿಷ್ಕಾರಗಳನ್ನು ಕಾರ್ಯಗತ ಗೊಳಿಸಲು ಕೌಶಲ್ಯಗಳನ್ನು ಚೆನ್ನಾಗಿ ಕಲಿಯಬೇಕಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಜ್ಞಾನ ಹಾಗೂ ಕೌಶಲ್ಯ ಭರಿತ ಶಿಕ್ಷಣದೊಂದಿಗೆ ಕಾರ್ಯ ನಿರ್ವಹಿಸಿ ಯಶಸ್ಸು ಗಳಿಸುವ ಸಂದರ್ಭದಲ್ಲಿ ವಿನಮ್ರತೆ ಮತ್ತು ವೈಫಲ್ಯದ ಸಮಯದಲ್ಲಿ ತಾಳ್ಮೆ ಅಳವಡಿಸಿಕೊಂಡಾಗ ಮಾತ್ರ ವಿದ್ಯಾರ್ಥಿಗಳ ಭವಿಷ್ಯ ಉತ್ತಮಗೊಳ್ಳುವುದರೊಂದಿಗೆ ವೃತ್ತಿಜೀವನ ಹೊಸ ಎತ್ತರಕ್ಕೆ ಸಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪಿ. ಶ್ಯಾಮ್, ಟ್ರಸ್ಟ್‌ನ ಪದಾಧಿಕಾರಿಗಳಾದ ಎನ್.ಆರ್. ಪಂಡಿತಾರಾಧ್ಯ, ಸಿ.ವಿನೋದ್ ಹಯಗ್ರೀವ, ಡಾ. ಎ.ವಿ.ಎಸ್. ಮೂರ್ತಿ, ಡಿ.ಪಿ. ನಾಗರಾಜ್, ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಹ್ಮಣ್ಯ, ಉಪ ಪ್ರಾಂಶುಪಾಲೆ ಡಾ. ಕೆ.ಎಸ್. ಗೀತಾ ಮತ್ತಿತರರು ಉಪಸ್ಥಿತರಿದ್ದರು.

ಎಂ ಟೆಕ್ ಮತ್ತು ಎಂ ಸಿ ಎ ಯ 17 ಹಾಗೂ ಬಿ.ಇ ಯ 12 ಪದವೀಧರರಿಗೆ ಚಿನ್ನದ ಪದಕ ಪ್ರಧಾನ ಮಾಡಲಾಯಿತು. 1455 ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.